# ಬೆಳಗಾವಿಯ ಶೇ 17ರಷ್ಟು ಜನರಿಗೆ ತಲೆ ಮತ್ತು ಕುತ್ತಿಗೆ ಕ್ಯಾನ್ಸರ್‌ನ ಅಪಾಯ



# ಬೆಳಗಾವಿಯ ಶೇ 17ರಷ್ಟು ಜನರಿಗೆ ಕ್ಯಾನ್ಸರ್‌ನ ಅಪಾಯ

ಬೆಳಗಾವಿ, ಮೇ 29: ಬೆಳಗಾವಿಯಲ್ಲಿ ತಂಬಾಕು ಸೇವನೆಯಿಂದ ಉಂಟಾಗುವ ಕಾಯಿಲೆಗಳ ಕುರಿತು ಇಂಡಸ್ ಹೆಲ್ತ್‌ಪ್ಲಸ್ ಸಂಸ್ಥೆ ಡಾ. ಪ್ರಭಾಕರ ಕೋರೆ ಆಸ್ಪತ್ರೆ ಮತ್ತು ವೈದ್ಯಕೀಯ ಸಂಶೋಧನಾ ಕೇಂದ್ರದ ಸಹಯೋಗದಲ್ಲಿ ಅಧ್ಯಯನ ನಡೆಸಿದ್ದು, ಧೂಮಪಾನ ಮಾಡುವ ಮಹಿಳೆಯರಲ್ಲಿ ಶೇ. 6 ಆಸ್ಟಿಓಪರಸಿಸ್ (ಮೂಳೆ ಸಂಧಿವಾತ)ದಿಂದ ಬಳಲುತ್ತಿದ್ದಾರೆ ಎಂದು ಹೇಳಿದೆ.

ಮೇ 31ನ್ನು ವಿಶ್ವ ತಂಬಾಕುರಹಿತ ದಿನವನ್ನಾಗಿ ಆಚರಿಸಲಾಗುತ್ತಿರುವ ಹಿನ್ನೆಲೆಯಲ್ಲಿ ಈ ಅಧ್ಯಯನ ನಡೆಸಲಾಗಿತ್ತು. ಬೆಳಗಾವಿಯಲ್ಲಿ ತಂಬಾಕು ಸೇವನೆ ಆರೋಗ್ಯಕ್ಕೆ ಒಡ್ಡಿರುವ ಅಪಾಯಗಳನ್ನು ವರದಿ ಒತ್ತಿ ಹೇಳಿದೆ.

ಈ ಪ್ರದೇಶದಲ್ಲಿ ಬೀಡಿ ಮತ್ತು ಚಿಲಂ ಹೊಗೆ ಸೇವನೆ ಸರ್ವೇಸಾಧಾರಣ. ಇದರಿಂದಾಗಿ 35–45 ವಯೋಮಿತಿಯಲ್ಲಿರುವ ಪುರುಷರು ಮತ್ತು ಮಹಿಳೆಯರಿಬ್ಬರಲ್ಲೂ ಕ್ಯಾನ್ಸರ್ ಅಪಾಯ ಹೆಚ್ಚಿದೆ. ಶೇ. 8.11 ಪುರುಷರು ಮತ್ತು ಶೇ. 8.64 ಮಹಿಳೆಯರು ಬಾಯಿ, ತಲೆ ಮತ್ತು ಕುತ್ತಿಗೆ ಕ್ಯಾನ್ಸರಿನಿಂದ ಬಳಲುತ್ತಿದ್ದಾರೆ. ಇದೇ ವಯೋಮಾನದವರಲ್ಲಿ ಶೇ. 6 ತಂಬಾಕು ಸೇವನೆ ಮತ್ತು ಅತಿಯಾದ ಒತ್ತಡದ ಕಾರಣಗಳಿಂದಾಗಿ ದಿಢೀರ್ ಹೃದಯಾಘಾತಗಳಿಗೆ ಬಲಿಯಾಗುತ್ತಿದ್ದಾರೆ.

ಗಮನಿಸಿದಂತೆ ಹೆಚ್ಚು ಹೆಚ್ಚು ಯುವಜನರು ಸಿಗರೇಟ್ ಸೇವನೆಯ ಚಟಕ್ಕೆ ಬೀಳುತ್ತಿದ್ದಾರೆ. ಇದರಿಂದ ಅತಿಯಾದ ಕೆಮ್ಮು ಮತ್ತು ಬ್ರಾಂಕೈಟಿಸ್ ಉಂಟಾಗುತ್ತದೆ. ಉಸಿರಾಟದ ಕಾಯಿಲೆಗಳಿಂದಾಗಿ ಬೆಳಗಾವಿಯ ಶ್ವಾಸಕೋಶಗಳ ಸರಾಸರಿ ಆಯುಷ್ಯ ಕಡಿಮೆಯಾಗುತ್ತಿದೆ. ಪುರುಷರಿಗೆ ಹೋಲಿಸಿದರೆ ಮಹಿಳೆಯರಲ್ಲಿ ಎದೆ ರೋಗಗಳು ಹೆಚ್ಚು (ಶೇ. 6.74). ಇದಕ್ಕೆ ಕಾರಣ ತಂಬಾಕು ಹೊಗೆ ಮತ್ತು ಹೊಗೆರಹಿತ ತಂಬಾಕು.

ತಂಬಾಕೆಂಬ ಸಾಂಕ್ರಾಮಿಕವನ್ನು ತುರ್ತಾಗಿ ನಿಗ್ರಹಿಸಬೇಕು. ಪರೋಕ್ಷವಾಗಿ ಹೊಗೆ ಸೇವಿಸಿದರೂ ಕ್ಯಾನ್ಸರ್, ಅಸ್ತಮಾ ಮತ್ತು ದಿಢೀರ್ ಹೃದಯಾಘಾತಗಳ ಅಪಾಯ ಹೆಚ್ಚುತ್ತದೆ. ತಂಬಾಕಿನಿಂದ ಉಂಟಾಗುವ ಸಾವು/ಕಾಯಿಲೆಗಳನ್ನು ತಡೆಯಬಹುದು. ಇಂದಿನ ಚಿಕ್ಕ ಹುಡುಗರು ಮತ್ತು ಹುಡುಗಿಯರು ಫ್ಯಾಷನ್ ಹೆಸರಿನಲ್ಲಿ ವಿನಾಶಕಾರಿ ಅಭ್ಯಾಸವನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಜೊತೆಯವರ ಒತ್ತಡ ಕೂಡ ಕಾರಣ. ಅದರಿಂದಾಗುವ ದುಷ್ಪರಿಣಾಮಗಳ ಬಗ್ಗೆ ಯುವಜನತೆಗೆ ಶಿಕ್ಷಣ ನೀಡಬೇಕು" ಎಂದು ಇಂಡಸ್ ಹೆಲ್ತ್ ಪ್ಲಸ್ ಪ್ರಿವೆಂಟೀವ್ ಹೆಲ್ತ್‌ಕೇರ್ ತಜ್ಞರಾದ ಶ್ರೀ ಅಮೋಲ್ ನಾಯಿಕವಾಡಿ ಹೇಳಿದರು.

ವಿಶ್ವ ಆರೋಗ್ಯ ಸಂಸ್ಥೆಯ ಅಂದಾಜುಗಳ ಪ್ರಕಾರ ಭಾರತದಲ್ಲಿ ತಂಬಾಕಿನಿಂದ ಎನ್ನಲಾದ ಸಾವುಗಳ ಸಂಖ್ಯೆ 1990ರಲ್ಲಿ ಶೇ. 1.4 ಇದ್ದದ್ದು 2020ರ ವೇಳೆಗೆ ಶೇ. 13.3ಕ್ಕೆ ಏರುವ ನಿರೀಕ್ಷೆಯಿದೆ.

belgaum3.jpg